1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 153/2021</u>

| | | |
|---|---|---|
| ಸಾಕ್ಷಿದಾರರ ಹೆಸರು | - ಹೆಚ್ ಎಂ ಚೇತನ್ | ಪಿಡಬ್ಲೂ - 1 |
| ತಂದೆಯ ಹೆಸರು | - ಹೆಚ್ ಎಸ್ ಮಂಜುನಾಥ ಗೌಡ | ಸಿಡಬ್ಲೂ - 1 |
| ವಯಸ್ಸು | - 43 ವರ್ಷ | |
| ಉದ್ಯೋಗ | - ವ್ಯವಸಾಯ | |
| ವಾಸ ಸ್ಥಳ | - ಹೆಡದಾಳ್ | |

ದಿನಾಂಕಃ 24/06/2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಗೊತ್ತು. ಅವರು ನಮ್ಮ ಊರಿನವರು. ಚಾಸಾ.10 ನನ್ನ ತಮ್ಮ. ಚಾಸಾ.11 ನನ್ನ ತಾಯಿ. ಚಾಸಾ.12 ನನ್ನ ಹೆಂಡತಿ. ಚಾಸಾ.2, ಚಾಸಾ.3 , ಚಾಸಾ.13 ಮತ್ತು ಚಾಸಾ.14 ಗೊತ್ತು. ಅವರು ನಮ್ಮ ಊರಿನವರು.

2. 2019 ನೇ ಇಸವಿಯಲ್ಲಿ ನನ್ನ ತಂದೆ ತಾಯಿ ಮತ್ತು 1 ನೇ ಆರೋಪಿ ಮತ್ತು ಆತನ ತಂದೆ ತಾಯಿಯ ನಡುವೆ ನಮ್ಮ ತಂದೆಯ ಹೆಸರಿನಲ್ಲಿದ್ದ 9 ಗುಂಟೆ ಜಮೀನನ್ನು ಮೂರುವರೆ ಲಕ್ಷ ರೂಪಾಯಿಗೆ ಮಾರಾಟ ಮಾಡಲು ಮಾತುಕತೆಯಾಗಿತ್ತು. ಆ ಸಮಯದಲ್ಲಿ 1 ನೇ ಆರೋಪಿಯ ತಾಯಿ ನನ್ನ ತಾಯಿಗೆ ಮುಂಗಡವಾಗಿ 10 ಸಾವಿರ ಹಣವನ್ನು ಕೊಟ್ಟಿದ್ದರು. ಉಳಿದ ಹಣವನ್ನು ಹೊಂದಿಸಿ ಮೂರು ತಿಂಗಳ ಒಳಗೆ ನೊಂದಣಿ ಮಾಡಿಸುವುದಾಗಿ 1 ನೇ ಆರೋಪಿಯ ತಾಯಿ ಹೇಳಿದ್ದರು. ಆದರೆ ಅವರು ಹಣವನ್ನು ಹೊಂದಿಸಲಾಗದ ಕಾರಣ ಸದರಿ ವ್ಯವಹಾರ ಅಲ್ಲಿಗೆ ಮುರಿದುಬಿದ್ದಿತ್ತು. ನಮಗೆ ಕೊಟ್ಟಿದ್ದ 10 ಸಾವಿರ ಮುಂಗಡ

ಹಣವನ್ನು ನಾವು ಹಿಂದಿರುಗಿಸಿರಲಿಲ್ಲ. ಆ ಬಗ್ಗೆ 1 ನೇ ಆರೋಪಿಯ ಮನಸ್ಸಿನಲ್ಲಿ ದ್ವೇಷ ಉಳಿದುಕೊಂಡಿತ್ತು.

3. ದಿಃ 03/06/2021 ರಂದು ಸಂಜೆ 6 ಗಂಟೆಗೆ ನಮ್ಮ ಊರಿನ ದೇವಿರಮ್ಮ ದೇವಸ್ಥಾನದ ಹತ್ತಿರ 1 ನೇ ಆರೋಪಿಯ ಮತ್ತು ಆತನ ಅಣ್ಣನಾದ ಕಿಶೋರ್ ನಮ್ಮ ಊರಿನ ಉತ್ತಮ್ ಎಂಬಾತನೊಂದಿಗೆ ಜಗಳ ಮಾಡುತ್ತಿದ್ದರು .ಆಲ್ದೂರಿಗೆ ಔಷಧಿಯನ್ನು ತರಲು ಹೋಗಿದ್ದ ನಾನು ಆ ಸಮಯದಲ್ಲಿ ಅದೇ ರಸ್ತೆಯಲ್ಲಿ ದೇವಿರಮ್ಮ ದೇವಸ್ಥಾನದ ಹತ್ತಿರ ಬಂದೆನು. ಆಗ ನಾನು ಕಾರಿನಿಂದ ಇಳಿದು 1 ನೇ ಆರೋಪಿ ಮತ್ತು ಆತನ ಅಣ್ಣನನ್ನು ಕುರಿತು ಚಿಕ್ಕ ಹುಡುಗನಿಗೆ ಏಕೆ ಹೊಡೆಯುತ್ತಿದ್ದೀರಿ ಎಂದು ಬುದ್ಧಿ ಹೇಳಿದೆನು. ಆಗ 1 ನೇ ಆರೋಪಿ ಮತ್ತು ಆತನ ಅಣ್ಣನಾದ ಕಿಶೋರ್ 10 ಸಾವಿರ ರೂಪಾಯಿಯನ್ನು ಹಿಂದಿರುಗಿಸಲು ಯೋಗ್ಯತೆ ಇಲ್ಲದವನು ನೀನು ಆತನ ಜಗಳಕ್ಕೆ ನೀನ್ಯಾಕೆ ಬರುತ್ತೀಯಾ, ನೀನು ಅವನ ಸಪೋರ್ಟ್ ಗೆ ಬಂದರೆ ನಿಮ್ಮ ಮನೆಗೆ ಬಂದು ನಿನ್ನನ್ನು ಸಾಯಿಸುತ್ತೇನೆ ಎಂದು ಹೇಳಿದನು.

4. ದಿಃ 04/06/2021 ರಂದು ರಾತ್ರಿ 10.30 ಗಂಟೆಗೆ 1 ನೇ ಆರೋಪಿ ನನಗೆ ಫೋನ್ ಮಾಡಿ ನಿನ್ನ ಹತ್ತಿರ ಸ್ವಲ್ಪ ಮಾತನಾಡಬೇಕು ದೇವಸ್ಥಾನದ ಹತ್ತಿರ ಬರುತ್ತೀರಾ ಎಂದು ಕೇಳಿದನು. ಆಗ ನಾನು ಇಷ್ಟು ಹೊತ್ತಿನಲ್ಲಿ ಬರಲು ಆಗುವುದಿಲ್ಲ ಎಂದು ಹೇಳಿದೆನು. ನಂತರ ರಾತ್ರಿ 10.45 ಗಂಟೆಗೆ ನಮ್ಮ ಊರಿನ ಪಂಚಾಯಿತಿಯ ಮೆಂಬರ್ ದಿನೇಶ್ ರವರು ನನಗೆ ಫೋನ್ ಮಾಡಿ ನನ್ನನ್ನು ಮತ್ತು ನನ್ನ ತಮ್ಮನನ್ನು ಹೊಡೆದು ಸಾಯಿಸಲು 1 ನೇ ಆರೋಪಿ ಕೋವಿಯನ್ನು ಇಟ್ಟುಕೊಂಡಿದ್ದಾನೆ ಹುಷಾರು ಮನೆಯಿಂದ ಹೊರಗೆ ಬರಬೇಡ ಎಂದು ಹೇಳಿದನು. ನಂತರ ನಾನು ನನ್ನ ತಾಯಿಯ ಬಳಿ ಹೋಗಿ ಸದರಿ ವಿಚಾರವನ್ನು ಹೇಳುತ್ತಿದ್ದೆನು. ಅಷ್ಟರಲ್ಲಿ ರಾತ್ರಿ ಸುಮಾರು

11.30 ಗಂಟೆಗೆ 1 ನೇ ಆರೋಪಿ ತನ್ನ ವರ್ಣ ಕಾರಿನಲ್ಲಿ ಬಂದು ನಮ್ಮ ಮನೆಯ ಮುಂದೆ ನಿಲ್ಲಿಸಿ ನನ್ನನ್ನು ಕುರಿತು ಚೇತನ್ ಗೌಡ ನಿನ್ನ ಕಾರನ್ನು ಯಾರೋ ತೆಗೆದುಕೊಂಡು ಹೋಗುತ್ತಿದ್ದಾರೆ ಹೊರಗೆ ಬಾರೋ ಎಂದು ಜೋರಾಗಿ ಕೂಗಿದನು. ಆಗ ಮನೆಯ ಒಳಗೆ ನಾನು, ನನ್ನ ಹೆಂಡತಿ, ತಂದೆ-ತಾಯಿ ಮತ್ತು ತಮ್ಮ ಇದ್ದೆವು. ನಮ್ಮ ಮನೆಯ ಎದುರಿಗೆ ಬೀದಿ ದೀಪ ಇದೆ. ನನ್ನ ತಾಯಿ ಕಿಟಕಿಯಿಂದ ಹೊರಗೆ ನೋಡಿದಾಗ ಸದರಿ ದೀಪದ ಬೆಳಕಿನಲ್ಲಿ 1 ನೇ ಆರೋಪಿ ಕೈಯಲ್ಲಿ ಕೋವಿಯನ್ನು ಹಿಡಿದುಕೊಂಡು ಬಂದಿರುವುದನ್ನು ಕಂಡರು ಮತ್ತು ಹೊರಗಿನಿಂದ ಕೇಳಿ ಬಂದ ಧ್ವನಿ 1 ನೇ ಆರೋಪಿಯದ್ದು ಎಂದು ಗೊತ್ತಾಗಿ ನನ್ನ ತಾಯಿ ಆತನನ್ನು ಕುರಿತು ಇಷ್ಟು ಹೊತ್ತಿನಲ್ಲಿ ಮನೆಯ ಹತ್ತಿರ ಬಂದಿದ್ದೀಯಾ ನಿನಗೆ ಯಾರು ಹೇಳುವವರು, ಕೇಳುವವರು ಇಲ್ಲವೇ ಎಂದು ಹೇಳಿದರು. ಆದರೆ 1 ನೇ ಆರೋಪಿ ನನ್ನ ತಾಯಿಯ ಮಾತನ್ನು ಲೆಕ್ಕಿಸದೇ ನಿಮ್ಮನ್ನು ಉಳಿಸುವುದಿಲ್ಲ ಎಂದು ಹೇಳಿ ನಮ್ಮ ಮನೆಯ ಬಾಗಿಲಿಗೆ ತನ್ನ ಕೋವಿಯಿಂದ 3 ರಿಂದ 4 ಬಾರಿ ಗುಂಡನ್ನು ಹಾರಿಸಿದನು. ನಮ್ಮ ಮನೆಯ ಬಾಗಿಲಿನ ಮುಂಭಾಗದಲ್ಲಿ ಕೆಎ-05-ಎಂ ಎಫ್ -764 ನೊಂದಣಿ ಸಂಖ್ಯೆಯುಳ್ಳ ನನ್ನ ಮಾರುತಿ 800 ಕಾರನ್ನು ನಿಲ್ಲಿಸಿದ್ದೆನು. 1 ನೇ ಆರೋಪಿ ಸದರಿ ಕಾರಿಗೂ ಸಹ 2 ರಿಂದ 3 ಬಾರಿ ತನ್ನ ಕೋವಿಯಿಂದ ಗುಂಡನ್ನು ಹಾರಿಸಿದನು. ನಮ್ಮ ಮನೆಯ ಮೇಲ್ಭಾಗದಲ್ಲಿ ಒಂದು ರೂಮ್ ಇದೆ. ಸದರಿ ರೂಮಿನಲ್ಲಿ ನನ್ನ ತಮ್ಮ ಮಲಗಿರಬಹುದು ಎಂದು ಭಾವಿಸಿ, ಸದರಿ ರೂಮಿನ ಮೇಲ್ಭಾಗಕ್ಕೆ ಸಹ 1 ನೇ ಆರೋಪಿ 1 ಬಾರಿ ತನ್ನ ಕೋವಿಯಿಂದ ಗುಂಡನ್ನು ಹಾರಿಸಿದನು. ಗುಂಡಿನ ಶಬ್ಧ ಕೇಳಿ ಊರಿನವರು ನಮ್ಮ ಮನೆಯ ಹತ್ತಿರ ಬಂದು 1 ನೇ ಆರೋಪಿಯನ್ನು ಕುರಿತು ಏನು

ಮಾಡುತ್ತಿದ್ದೀಯಾ ಎಂದು ಕೇಳಿದಾಗ ನೀವು ಯಾರಾದರೂ ಸಾಕ್ಷಿಗೆ ಬಂದರೆ ಯಾರನ್ನು ಉಳಿಸುವುದಿಲ್ಲ ಎಂದು ಹೆದರಿಸಿ ತನ್ನು ವರ್ನ ಕಾರನ್ನು ತೆಗೆದುಕೊಂಡು ಹೊರಟು ಹೋದನು.

5. ನಂತರ ನನ್ನ ಹೆಂಡತಿ 112 ಸಹಾಯ ವಾಣಿಗೆ ಪೋನ್ ಮಾಡಿದಳು. ಆದಾದ 20 ನಿಮಿಷಕ್ಕೆ 112 ಸಹಾಯ ವಾಣಿಯವರು ನಮ್ಮ ಮನೆಯ ಹತ್ತಿರ ಬಂದರು ಮತ್ತು ಅವರು ಬೆಳಗಿನ ಜಾವಾ 5 ಗಂಟೆಯವರೆಗೂ ಅಲ್ಲಿಯೇ ಇದ್ದರು. ನಂತರ ನಾನು ಮಾರನೇ ದಿನ ಅಂದರೆ ದಿಃ 05/06/2021 ರಂದು ಬೆಳಗ್ಗೆ 6 ಗಂಟೆಗೆ ಮಲ್ಲಂದೂರು ಪೊಲೀಸ್ ಠಾಣೆಗೆ ಹೋಗಿ 1 ನೇ ಆರೋಪಿಯ ವಿರುದ್ಧ ದೂರನ್ನು ಕೊಟ್ಟೆನು. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ.

6. ಸಾಕ್ಷಿಯು ದೂರು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ದೂರನ್ನು ನಿಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸದರಿ ದೂರಿನ ಮೇರೆಗೆ ಪೊಲೀಸರು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ಅದರ ಪ್ರತಿಯನ್ನು ನನಗೆ ನೀಡಿರುತ್ತಾರೆ. ಸಾಕ್ಷಿಯು ಪ್ರಥಮ ವರ್ತಮಾನ ವರದಿಯ ಕಲಂ 12 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಪ್ರಥಮ ವರ್ತಮಾನ ವರದಿಯನ್ನು ನಿಪಿ.2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

7. ನಂತರ ಬೆಳಗ್ಗೆ 9 ಗಂಟೆಗೆ ಪೊಲೀಸರು ಮಹಜರ್ ಜರುಗಿಸುವ ಸಲುವಾಗಿ ನಮ್ಮ ಮನೆಯ ಹತ್ತಿರ ಬಂದಿದ್ದರು. ಆಗ ನಾನು ಅವರಿಗೆ ಮೇಲೆ ಹೇಳಿದಂತೆ ಕೃತ್ಯ ನಡೆದಿದ್ದ ಸ್ಥಳವನ್ನು ತೋರಿಸಿದೆನು. ಆ ಸಮಯದಲ್ಲಿ ಚಾಸಾ.2 ಮತ್ತು 3 ರವರು ಹಾಜರಿದ್ದರು. ಸದರಿ

ಸ್ಥಳದಲ್ಲಿ ಪೊಲೀಸರು ಬೆಳಗ್ಗೆ 9.00 ಗಂಟೆಯಿಂದ 11.30 ಗಂಟೆಯವರೆಗೆ ಮಹಜರ್ ಮಾಡಿಕೊಂಡು ನಮ್ಮ ಸಹಿಯನ್ನು ಪಡೆದುಕೊಂಡರು. ಸದರಿ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು.

8. ಸಾಕ್ಷಿಗೆ 4 ಪೋಟೋಗಳನ್ನು ತೋರಿಸಲಾಗಿದೆ ಅವುಗಳಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪೋಟೋಗಳನ್ನು ಮಹಜರ್ ಜರುಗಿಸುವ ಸಮಯದಲ್ಲಿ ಪೊಲೀಸರು ಕೃತ್ಯ ನಡೆದ ಸ್ಥಳದಲ್ಲಿ ತೆಗೆದುಕೊಂಡಿದ್ದಾರೆ. ಸದರಿ ಪೋಟೋಗಳಲ್ಲಿ ನನ್ನೊಂದಿಗೆ ಚಾಸಾ.2, ಚಾಸಾ.3 ಮತ್ತು ಪೊಲೀಸರ ಇರುವಿಕೆ ಕಂಡು ಬರುತ್ತದೆ. ಸದರಿ ಪೋಟೋಗಳನ್ನು ನಿಪಿ.4 ರಿಂದ 7 ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಕಾಲಕ್ಕೆ ಪೊಲೀಸರು ಕೆಎ-05-ಎಂ ಎಫ್ -764 ನೊಂದಣಿ ಸಂಖ್ಯೆಯುಳ್ಳ ನನ್ನ ಮಾರುತಿ 800 ಕಾರನ್ನು ಅಮಾನತ್ತುಪಡಿಸಿಕೊಂಡರು. ಸದರಿ ಕಾರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಕಾರು ನಿಪಿ.4 ಮತ್ತು 5 ಪೋಟೋದಲ್ಲಿ ಕಂಡು ಬರುತ್ತದೆ ಎಂದು ನುಡಿದಿರುತ್ತಾರೆ. ಕಾರಿನ ಪಕ್ಕದಲ್ಲಿ ದೊರೆತ ಜಜ್ಜಿ ಹೋಗಿದ್ದ 7 ಗುಂಡಿನ ಚೂರುಗಳನ್ನು ಅಮಾನತ್ತುಪಡಿಸಿಕೊಂಡರು. ಸದರಿ ಚೂರುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ 7 ಗುಂಡಿನ ಚೂರುಗಳನ್ನು ಒಟ್ಟಾಗಿ ಮುದ್ದೆ ಮಾಲು 1 ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮಾ.1 ರ ಮೇಲೆ

ಅಂಟಿಸಲಾಗಿರುವ ಚೀಟಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ಮು.ಮಾ.1(ಎ) ಎಂದು ಗುರುತಿಸಲಾಯಿತು. ಕಾರಿನಲ್ಲಿ ಗುಂಡು ತಾಗಿ ರಂಧ್ರವಾಗಿದ್ದ ಸ್ಥಳದಲ್ಲಿದ್ದ ಕಾರಿನ ಬಣ್ಣದ ಪುಡಿಯನ್ನು ಪೊಲೀಸರು ಅಮಾನತ್ತುಪಡಿಸಿಕೊಂಡರು. ಸದರಿ ಬಣ್ಣದ ಪುಡಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಕಾರಿನ ಬಣ್ಣದ ಪುಡಿಯನ್ನು ಮುದ್ದೆ ಮಾಲು 2 ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮಾ.2 ರ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ಮು.ಮಾ.2(ಎ) ಎಂದು ಗುರುತಿಸಲಾಯಿತು. ನಮ್ಮ ಮನೆಯ ಮುಂಭಾಗದಲ್ಲಿ 1 ನೇ ಆರೋಪಿ ಹಾರಿಸಿದ್ದ 3 ಗುಂಡಿನ ಚೂರುಗಳನ್ನು ಪೊಲೀಸರು ಪಂಚನಾಮೆಯ ಕಾಲಕ್ಕೆ ಅಮಾನತ್ತುಪಡಿಸಿಕೊಂಡರು. ಸದರಿ 3 ಗುಂಡಿನ ಚೂರುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ 3 ಗುಂಡಿನ ಚೂರುಗಳನ್ನು ಒಟ್ಟಾಗಿ ಮುದ್ದೆ ಮಾಲು 3 ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮಾ.3 ರ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ಮು.ಮಾ.3(ಎ) ಎಂದು ಗುರುತಿಸಲಾಯಿತು. ನಂತರ ನಮ್ಮ ಮನೆಯ ಮುಂದೆ ಸಿಮೆಂಟ್ ನೆಲದಲ್ಲಿ ದೊರೆತ ಆರೋಪಿ ಕೃತ್ಯಕ್ಕೆ ಬಳಸಿದ್ದ ಬಂದೂಕಿನಿಂದ ಸಿಡಿದಿದ್ದ ಒಂದು ಫೈಬರ್ ನ ತುಂಡನ್ನು ಪೊಲೀಸರು ಪಂಚನಾಮೆಯ ಕಾಲಕ್ಕೆ ಅಮಾನತ್ತುಪಡಿಸಿಕೊಂಡರು. ಸದರಿ ಒಂದು ಫೈಬರ್ ನ ತುಂಡನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಒಂದು ಫೈಬರ್ ನ

ತುಂಡನ್ನು ಮುದ್ದೆ ಮಾಲು 4 ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮಾ.4 ರ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ಮು.ಮಾ.4(ಎ) ಎಂದು ಗುರುತಿಸಲಾಯಿತು. ನಂತರ ನಮ್ಮ ಮನೆಯ ಗೋಡೆಗೆ ಬಳಿಯಲಾಗಿದ್ದ ಕೇಸರಿ ಬಣ್ಣದ ಪುಡಿಯನ್ನು ಪೊಲೀಸರು ಪಂಚನಾಮೆಯ ಕಾಲಕ್ಕೆ ಅಮಾನತ್ತುಪಡಿಸಿಕೊಂಡರು. ಸದರಿ ಪುಡಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಕೇಸರಿ ಬಣ್ಣದ ಗೋಡೆಯ ಬಣ್ಣದ ಪುಡಿಯನ್ನು ಮುದ್ದೆ ಮಾಲು 5 ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮಾ.5 ರ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ಮು.ಮಾ.5(ಎ) ಎಂದು ಗುರುತಿಸಲಾಯಿತು. ನಂತರ ಪೊಲೀಸರು ನಮ್ಮ ಮನೆಯ ಹಾಲ್ ನಲ್ಲಿ ದೊರೆತ 1 ನೇ ಆರೋಪಿ ಬಂದೂಕಿನಿಂದ ಹಾರಿಸಿದ್ದ ಜಜ್ಜಿದಂತೆ ಆಗಿದ್ದ 4 ಗುಂಡಿನ ಚೂರುಗಳನ್ನು ಪಂಚನಾಮೆಯ ಕಾಲಕ್ಕೆ ಅಮಾನತ್ತುಪಡಿಸಿಕೊಂಡರು. ಸದರಿ 4 ಗುಂಡಿನ ಚೂರುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ 4 ಗುಂಡಿನ ಚೂರುಗಳನ್ನು ಒಟ್ಟಾಗಿ ಮುದ್ದೆ ಮಾಲು 6 ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮಾ.6 ರ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ಮು.ಮಾ.6(ಎ) ಎಂದು ಗುರುತಿಸಲಾಯಿತು.

9. ನಂತರ ನಮ್ಮ ಮನೆಯ ಹಾಲ್ ನ ಗೋಡೆಗೆ ಗುಂಡು ತಾಗಿ ರಂಧ್ರವಾಗಿರುವಂತೆ ಇದ್ದ ಸ್ಥಳದ ಪಕ್ಕದಲ್ಲಿದ್ದ ತಿಳಿ ಹಳದಿ ಬಣ್ಣದ

ಪುಡಿಯನ್ನು ಪೊಲೀಸರು ಪಂಚನಾಮೆಯ ಕಾಲಕ್ಕೆ ಅಮಾನತ್ತುಪಡಿಸಿಕೊಂಡರು. ಸದರಿ ಪುಡಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ತಿಳಿ ಹಳದಿ ಬಣ್ಣದ ಪುಡಿಯನ್ನು ಮುದ್ದೆ ಮಾಲು 7 ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮಾ.7 ರ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ಮು.ಮಾ.7(ಎ) ಎಂದು ಗುರುತಿಸಲಾಯಿತು.

(ಈ ದಿನ ಮುದ್ದೆ ಮಾಲು 1 ರಿಂದ 7 ಎಂದು ಗುರುತಿಸಲ್ಪಟ್ಟ ವಸ್ತುಗಳನ್ನು ಪ್ಯಾಕ್ ಮಾಡಿ ಎಫ್ ಎಸ್ ಎಲ್ ಸೀಲು ಮಾಡಲಾಗಿದ್ದು, ಅವುಗಳನ್ನು ಈ ದಿನ ತೆರೆದ ನ್ಯಾಯಾಲಯದಲ್ಲಿ ಆರೋಪಿತರು, ಅವರ ಪರ ವಕೀಲರು ಮತ್ತು ಸರ್ಕಾರಿ ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಗಿರುತ್ತದೆ.)

**(ಪಾಟೀ ಸವಾಲು: ಆರೋಪಿತರ ಪರ ವಕೀಲರು ಪ್ರತ್ಯಕ್ಷ ಸಾಕ್ಷಿದಾರರು ಎಂದು ಅಂತಿಮ ವರದಿಯಲ್ಲಿ ನಮೂದಿಸಿರುವ ಚಾಸಾ.10 ರಿಂದ ಚಾಸಾ.12 ರವರ ವಿಚಾರಣೆಯಾಗುವವರೆಗೆ ಪ್ರಸ್ತುತ ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿ ಅರ್ಜಿ ಸಲ್ಲಿಸಿದ ಮೇರೆಗೆ ಅದನ್ನು ಪರಿಗಣಿಸಿ ಸಾಕ್ಷಿಯ ಪಾಟೀ ಸವಾಲನ್ನು ಸದರಿ ಸಾಕ್ಷಿದಾರರ ಮುಖ್ಯವಿಚಾರಣೆಯಾಗುವವರೆಗೆ ಮುಂದೂಡಲಾಯಿತು.)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ